ದಿನಾಂಕಃ 05-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

3) ಪ್ರತಿವಾದಿ 1 ರವರು ನನ್ನ ಅತ್ತಿಗೆ. ಪ್ರತಿವಾದಿ 2 ರವರು ನನ್ನ ಅಣ್ಣನ ಮಗ. ಪ್ರತಿವಾದಿ 3 ರವರು 2 ನೇ ಪ್ರತಿವಾದಿ ಹೆಂಡತಿ. ದಾವಾ ಸರ್ವೇ ನಂಬರಿನಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 28 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪೂರ್ಣ ವಿಸ್ತೀರ್ಣದಲ್ಲಿ ಬೋಗ್ಯದಾರನಾಗಿ ಸ್ವಾಧೀನ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ದಾವಾ ಸರ್ವೇ ನಂಬರಿನಲ್ಲಿ 3 ಎಕರೆ ವಿಸ್ತೀರ್ಣದಲ್ಲಿ ಭತ್ತ ಬೆಳೆದಿರುತ್ತಾರೆ. ಉಳಿದ ಆಸ್ತಿಯಲ್ಲಿ ಪ್ರತಿವಾದಿ 2 ರವರು ಸ್ವಾಧೀನ ಇರುತ್ತಾರೆ. 4 ಎಕರೆ 28 ಗುಂಟೆ ಒಂದೇ ಚೆಕ್ಕುಬಂದಿ ಇರುತ್ತದೆ. ಬೋಗ್ಯ ಪತ್ರವನ್ನು ನವೀಕರಿಸುವ ಸಮಯದಲ್ಲಿ ನಾನು ಕರಾರು ಪತ್ರಕ್ಕೆ ಪ್ರತಿವಾದಿಗಳ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬೋಗ್ಯದ ಹಣವನ್ನು ಪ್ರತಿವಾದಿಗಳು ವಾಪಸ್ಸು ನೀಡಲು ಬಂದಾಗ ನಾನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

4) ನನ್ನ ಮಗ ಪ್ರತಿವಾದಿಗಳಿಂದ ಬರೆಸಿಕೊಂಡಿರುವ ಬೋಗ್ಯ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ದಿನಾಂಕ 27.01.2020 ರಂದು ಆಗಿರುವ ಬೋಗ್ಯ ಪತ್ರದಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಶಾನೆ ಡಿ-04 ಎಂದು ಗುರುತಿಸಲಾಯಿತು**. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಡಿ-4(ಎ)ಎಂದು ಗುರುತಿಸಲಾಯಿತು. ನಿಶಾನೆ ಡಿ-04 ಬೋಗ್ಯ ಪತ್ರ ಆಗುವ ಒಂದು ವರ್ಷ ಹಿಂದಿನಿಂದಲೂ ಸ್ವಾಧೀನ ಇರುತ್ತೇನೆ ಎಂದರೆ ಸಾಕ್ಷಿಯು 1 ಎಕರೆಯಲ್ಲಿ ಸ್ವಾಧೀನ ಇರುತ್ತೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ತಂದೆ ಬರೆದುಕೊಟ್ಟಿರುವ ಬೋಗ್ಯ ಪತ್ರವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನಾನು ಕರಾರು ಪತ್ರಕ್ಕೆ ಪ್ರತಿವಾದಿಗಳಿಗೆ ತಿಳಿಯದೆ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ದಿನಾಂಕ 16.01.2023 ರಂದು ನಾನು ಮತ್ತು ನನ್ನ ಮಗ ಪ್ರತಿವಾದಿಗಳಿಂದ ಕರಾರು ಪತ್ರ ಬರೆಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಬೋಗ್ಯ ಪತ್ರವನ್ನು ನವೀಕರಿಸುವ ರೀತಿಯಲ್ಲಿ ಬರೆಸಿಕೂಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಕರಾರು ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಶಾನೆ ಡಿ-05 ಎಂದು ಗುರುತಿಸಲಾಯಿತು**. ಸಹಿಯನ್ನು **ನಿಶಾನೆ ಡಿ-5(ಎ)ಎಂದು ಗುರುತಿಸಲಾಯಿತು**. ನಾನು ಪ್ರತಿವಾದಿಗಳಿಗೆ ತಿಳಿಯದೆ ಅಕ್ರಮವಾಗಿ ಪ್ರತಿವಾದಿಗಳಿಂದ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆಯ ಮೌಲ್ಯ ರೂ.25 ಲಕ್ಷ ಮೇಲ್ಪಟ್ಟಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ